ನಗರ ಡಿವಿಜ್ಞ ಡಿಸ್ಟ್ರಿಕ್ಟ್ ಜಡ್ಜಿಯವರ ಕೋರ್ಟಿನಲ್ಲಿ.

ಸ್ಯ 1895—96ನೇ ಇಸವಿ ಮಿಸಲೇನಿಯಸ್ ಅರ್ಜೀ ನಂಬರ್ 293.

ಮೃತಪಟ್ಟ ಅಬ್ದುಲ್ ರಹಿಮ್ಮಾನ್‌ಸಾಬರ ಆಸ್ತೀ ವಿಷಯದಲ್ಲಿ—

ಅರ್ಜೀದಾರು, ಶಿವಮೊಗ್ಗ ಕಸಬಾದಲ್ಲಿರುವ ಕಲ್ಲು ಕಲಸದ ರಹಿಮ್ಮಾನ್‌ಸಾಬರ ಮಕ್ಕಳು 1ನೇ ಇಬ್ರಾಹಿಂಯಾನೆ ಬಾಪುಸಾಬಿ, 2ನೇ ಮಹಮ್ಮದ್ ಟೀಪುಸಾಬಿ, ಮೃತಪಟ್ಟ ಸದರೀ ಅಬ್ದುಲ್ ರಹಿಮ್ಮಾನ್‌ಸಾಬರಿಗೆ ಸಹೋದರರು ಆಗಬೇಕೆಂಬ ಹಕ್ಕುದಾರಿ ಮೇಲೆ ಶಿವಮೊಗ್ಗ ಸ್ಥಳದ 1ನೇ ಇಬ್ರಾಹಿಂಯಾನೆ ಬಾಪುಸಾಬಿ, 2ನೇ ಮಹಮ್ಮದ ಟೀಪುಸಾಬಿ ಎಂಬವರು, ಶಿವಮೊಗ್ಗ ವಾಸಸ್ಥರಾಗಿ ಮೃತಪಟ್ಟ ಅಬ್ದುಲ್ ರಹಿಮ್ಮಾನ್‌ಸಾಬರ ಬೆಂಗಳೂರಿಗೆ ಬಗ್ಗಾಗಿ ಒರತಕ್ಕ 900 ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ ಸ್ಯ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬ್ಯೈ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ರಖಾಸ್ತುದಾರರಾದ 1ನೇ ಇಬ್ರಾಹಿಂಯಾನೆ ಬಾಪುಸಾಬಿ, 2ನೇ ಮಹಮ್ಮದ ಟೀಪುಸಾಬಿ ಇವರ ಅರ್ಜಿಯನ್ನು ಸ್ಯ 1896ನೇ ಇಸವಿ ಜುಲೈ ತಿಂಗಳ ತಾರೀಖು 10ರಲ್ಲಿ ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲ್ಸಲ್ಲಿ ಸದರೀ ಮೃತಪಟ್ಟ ಅಬ್ದುಲ್ ರಹಿಮ್ಮಾನ್‌ಸಾಬರ ಆಸ್ತಿಗೆ ಹಕ್ಕುದಾರರಾದ ವಿರುದ್ಧ್ಯರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ಯ 1895—96ನೇ ಇಸವಿ ಮಿಸಲೇನಿಯಸ್ ಅರ್ಜೀ ನಂಬರ್ 294.

ಮೃತಪಟ್ಟ ಪರಿವಾರದ ಗುಂಡೇರಾಯರ ಆಸ್ತೀ ವಿಷಯದಲ್ಲಿ—

ಅರ್ಜೀದಾರು, ಶಿವಮೊಗ್ಗದಲ್ಲಿ ವಾಸವಾಗಿರುವ ಪರಿವಾರದ ಸುಬ್ಬಾಯ, ಮೃತಪಟ್ಟ ಸದರೀ ಪರಿವಾರದ ಗುಂಡೇರಾಯರಿಗೆ ಮಗನು ಆಗಬೇಕೆಂಬ ಹಕ್ಕುದಾರಿ ಮೇಲೆ ಶಿವಮೊಗ್ಗ ಸ್ಥಳದ ಪರಿವಾರದ ಸುಬ್ಬಾಯನು, ಶಿವಮೊಗ್ಗ ವಾಸಸ್ಥರಾಗಿ ಮೃತಪಟ್ಟ ಪರಿವಾರದ ಗುಂಡೇರಾಯನ ಬೆಂದಿಗೆ ಬಗ್ಗಾಗಿ ಮೈಸೂರು ಮಹಾರಾಜರವರ ಸ್ಪಿನ್ನಿಂಗ್ ಅಂಡ್ ವ್ಯಾವ್ಯು ಫಾಕ್ಟರಿಂಗ್ ಕಂಪನಿಯಿಂದಲೂ ಮತ್ತು ಹೊರಗಿನಿಂದಲೂ ಒರತಕ್ಕ 1,000 ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ ಸ್ಯ 1860ನೇ ಇಸವಿ 27ನೇ ಆಕ್ಟ್ ಮೇರಿಗೆ ಸರ್ಟಿಫಿಕೇಟ್ ಬ್ಯೈ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ರಖಾಸ್ತುದಾರರಾದ ಪರಿವಾರದ ಸುಬ್ಬಾಯರ ಅರ್ಜಿಯನ್ನು ಸ್ಯ 1896ನೇ ಇಸವಿ ಜುಲೈ ತಿಂಗಳ ತಾರೀಖು 10ರಲ್ಲಿ ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಪರಿವಾರದ ಗುಂಡೇರಾಯರ ಆಸ್ತಿಗೆ ಹಕ್ಕುದಾರರಾದ ವಿರುದ್ಧ್ಯರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ಯ 1896ನೇ ಇಸವಿ ಮೇ ತಿಂಗಳ 5ನೇ ತಾರೀಖಿನಲ್ಲಿ ಕೋರ್ಟ್ ಮೊಹರ್ ನಿಶಿ ನಮ್ಮ ದಸ್ತಖತ್ತುಗಳನ್ನೇ ಕೊಡಿಸಲಾಗಿದೆ.

ಬಿ. ತಿರುಮಲಾಚಾರ್,
ಡಿಸ್ಟ್ರಿಕ್ಟ್ ಜಡ್ಜ.

ಕಡೂರು ಡಿಸ್ಟ್ರಿಕ್ಟ್.
ಎಕ್ಸೈಜ್ ಡಿಪಾರ್ಟ್‌ಮೆಂಟ್.
1896ನೇ ಇಸವಿ ಏಪ್ರಿಲ್ 28ನೇ ಮಲ್ಕುಂ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—

1. ಈ ಕೆಳಗೆ ಕಂಡ ಕಡೂರು ಡಿಸ್ಟ್ರಿಕ್ಟ್ ತಾಲ್ಲೂಕುಗಳ ಬಗಣಿ ಕೇಂದ್ರ ಉತ್ತಾರು ಮತ್ತು ಮಾರುವ ಹಕ್ಕು ಸ್ಯ 1896ನೇ ಜುಲೈ ಗುರ್ತೇ ಲಾಗಾಯತು 1897ನೇ ಜೂ 30ರ ವರಿಗೆ ಗ್ರಾಮವಾರಾಗಿ ಯಾಗಲಿ ಅಥವಾ ಗ್ರಾಮ ಸಮುದಾಯತ್ವೇನ ಆಗಲಿ ಆಯಾ ತಾಲ್ಲೂಕ್ ಬಾಜಾರಲ್ಲಿ ನಮೂದಿಸುವ ತಾರೀಖುಗಳಲ್ಲಿ ಇದರ ಕೆಳಗೆ ವಿವರಿಸುವ ಪ್ರಕಾರ್ತುಗಳಿಗೆ ಒಳಪಟ್ಟು ಆಯಾ ತಾಲ್ಲೂಕ್ ಕಛೇರಿ ರೂಬರೂ ಅಸಿಸ್ಟೆಂಟ್ ಕಮ್ಮಿಷನರವರಿಂದಾಗಲಿ ಅಥವಾ ಅಮಲ್ದಾರ್‌ರವರಿಂದಲಾಗಲಿ ಬಹಿರಂಗವಾಗಿ ಹರಾಜು ಮೂಲಕ ವಿಕ್ರಯಿಸಲ್ಪಡುತ್ತೆ.

ತಾಲ್ಲೂಕು.	ಹರಾಜು ತಾರೀಖ್.
1. ಚಿಕ್ಕಮಗಳೂರು	ಮೇ ತಿಂಗಳ 27ರ ಲಾಗಾಯತು 29ರವರಿಗೆ
2. ಮೂಡಿಗೆರೆ	ಡಿಟೋ 25 ಮತ್ತು 26ನೇ ತಾರೀಖುಗಳು.
3. ಕೊಪ್ಪ	ಜೂ ತಿಂಗಳ 3ನೇ ತಾರೀಖು ಲಾಗಾಯತು 5ರವರಿಗೆ
4. ಯಡೆಹಳ್ಳಿ	ಜೂ 6 ಮತ್ತು 7ನೇ ತಾರೀಖುಗಳು.

2. ಪ್ರತಿ ಬಂದು ಸರ್ಕಲ್ ಗುತ್ತಿಯು ಚಡವರ ಖಾಸ್ತುದಾರನಿಗೆ ಕೊಡಲ್ಪಡುವದು. ಸದರಿ ಚಡವ ಕಳದ ಸಾಲ್ ವೊಳಗೆ ಕಮ್ಮಿ ಇರಕೂಡದು. ಈ ಹರಾಜು ಡೆಪ್ಯೂಟಿ ಕಮ್ಮಿಷನರವರ ಮಂಜೂ ಇರುತ್ತೆ. ಅಂಥಾ ಹರಾಜಿಗೆ ಸಮ್ಮಂಧಪಟ್ಟ ರಿಕಾರ್ಡುಗಳನ್ನು ಸದರೀಯವರು ಡೆಪ್ಯೂಟಿ ಕ ಡೆಪ್ಯೂಟಿ ಕಮ್ಮಿಷನರವರು ಯಾವದೊಂದು ದರಖಾಸ್ತು ಅಥವಾ ಚಡ ದರಖಾಸ್ತನ್ನಾದ ತಿರಸ್ಕರಿಸುವದಕ್ಕೆ ಸ್ವತಂತ್ರರಾಗಿರುತ್ತಾರೆ.